# ರಾಜ್ ಜೊತೆ ನಟಿಸಿದ್ದು ರೋಮಾಂಚಕ



ಅಭಿಜಿತ್ ಉದಯದ 'ಗಂಗೆ ಗೌರಿ'ಯ ಚಂದ್ರಶೇಖರ್

**◆ ನಿಮ್ಮಲ್ಲಿರುವ ಕಲಾವಿದನ ಶೋಧ ಹೇಗೆ ಮಾಡಿದಿರಿ?**

ಚಿಕ್ಕವಯಸ್ಸಿನಲ್ಲಿ ಸಿನಿಮಾ ನೋಡುವ ಹುಚ್ಚು ಹತ್ತಿಕೊಂಡಿತು. ಬಾಲ್ಯದ ದಿನಗಳಲ್ಲಿ ತುಂಬ ಸಿನಿಮಾ ನೋಡಿದ್ದೇನೆ. ಅದರ ಪ್ರಭಾವ ನಟನಾಗಬೇಕು ಎನ್ನುವ ಆಸೆಯನ್ನು ನನ್ನಲ್ಲಿ ಹುಟ್ಟಿಸಿತು. ದಿನ ಕಳೆದಂತೆ ಅದು ಜಾಸ್ತಿ ಆಗುತ್ತಾ ಹೋದರೆ, ಓದು ಕಡಿಮೆ ಆಯಿತು. ಹಾಗಾಗಿ ಸಿನಿಮಾ ಸೇರಬೇಕು ಎಂದು ಅವಕಾಶವನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಜನ ಚಪ್ಪಾಳೆ ತಟ್ಟಿ ಹೇಳಿದಾಗಲೇ ನಾನೂ ಒಬ್ಬ ಕಲಾವಿದ ಎಂದು ಅನಿಸಿದೆ.

**◆ ಸಿನಿ ಪಯಣದ ಆರಂಭದ ದಿನಗಳು ಹೇಗಿದ್ದವು?**

ಬಣ್ಣ ಹಚ್ಚಿ ಕ್ಯಾಮೆರಾ ಎದುರು ನಿಂತ ಮೇಲೆಯೇ ನಟನೆಯನ್ನು ಕಲಿಯುವ ಪ್ರಯತ್ನ ಮಾಡಿದೆ ಅಂದರೆ ಸರಿ ಆಗಬಹುದು. ನಟನೆಯ ಪಟ್ಟುಗಳನ್ನು ನಾನು ಇಲ್ಲೇ ಕಲಿತಿದ್ದು. ಇದಕ್ಕೂ ಮೊದಲು ರಂಗಭೂಮಿ ಸೇರಿದಂತೆ ಯಾವ ವೇದಿಕೆಯೂ ಸಿಕ್ಕಿರಲಿಲ್ಲ. ರಾಜ್‌ಕುಮಾರ್, ವಿಷ್ಣುವರ್ಧನ್ ಅವರ ಸಿನಿಮಾಗಳನ್ನು ನೋಡಿ ನಟನಾಗಲು ಬಂದೆ. ಅಭಿನಯದ ಅನುಭವ ಇಲ್ಲದೆ ಇಂಡಸ್ಟ್ರಿಗೆ ಬಂದು ಕಲಿತೆ. ಇದೇ ನನಗೆ ರಂಗಶಾಲೆ ಆಯಿತು.

**◆ ವೃತ್ತಿ ಜೀವನದಲ್ಲಿ ಸ್ಮರಣೀಯ ಎನ್ನುವ ಸಂದರ್ಭ ನೆನಪಿಸಿಕೊಳ್ಳಬಹುದಾ?**

ಹಿಂದಿನ ಜೀವನ ನೋಡಿದರೆ ಸುಖವೂ ಇದೇ ದುಃಖವೂ ಇದೆ. ಬಹಳಷ್ಟು ಸಾರಿ ನನ್ನ ಬಗ್ಗೆ ಹೆಮ್ಮೆ ಅನ್ನಿಸುತ್ತದೆ. ರಾಜ್‌ಕುಮಾರ್ ಅವರ ಜೊತೆ ನಟಿಸಲು ಸಿಕ್ಕ ಮೊದಲ ಅವಕಾಶ ರೋಮಾಂಚನವನ್ನು ಉಂಟುಮಾಡಿತ್ತು. ಅವರ ಸಿನಿಮಾ ನೋಡಿ ಬಂದ ನಾನು, ಅವರ ಪಕ್ಕದಲ್ಲಿ ನಿಂತು ಅಭಿನಯಿಸುವ ಸಂದರ್ಭದ ಖುಷಿ ಹೇಳಲು ಮಾತಿಗೆ ನಿಲುಕುವುದಿಲ್ಲ. ಸಣ್ಣ ಪಾತ್ರ ಸಿಕ್ಕರೆ ಸಾಕು ಎಂದು ಸಾಯುತ್ತಿದ್ದವನಿಗೆ ಅವರ ಮಗನ ಪಾತ್ರ ಮಾಡಿದೆ. ಅವರ ಒಡನಾಟ ಸಿಕ್ಕಿತು. ನಂತರ ನಟನೆಗೆ ದಟ್ಟ ಅವಕಾಶಗಳು ತೆರೆದುಕೊಂಡವು. ಖಳನಾಯಕನಾಗಿ, ನಾಯಕ ನಟನಾಗಿಯೂ ಕಾಣಿಸಿಕೊಂಡೆ. ವಿಷ್ಣುವರ್ಧನ್ ಅವರ ಜೊತೆ 'ಯಜಮಾನ' ಮಾಡಿದ್ದು ಅವರ ಜೊತೆ ಆಪ್ತ ಸ್ನೇಹ ದಕ್ಕಿದ್ದು ಸೌಭಾಗ್ಯದ ದಿನಗಳು. ನಂತರ ನಿರ್ಮಾಪಕ ಕೂಡ ಆಗಬೇಕಾಯಿತು. ಏಕೆಂದರೆ, ನನ್ನ ಬಳಿ ಸಿನಿಮಾ ಇರಲಿಲ್ಲ. ಹಾಗಾಗಿ ಮೂರು ಸಿನಿಮಾ ನಿರ್ಮಾಣ ಮಾಡಿದೆ. ಎರಡು ಸಿನಿಮಾಗಳಿಂದ ಪರ್ವಾಗಿಲ್ಲ ಅನ್ನುವ ಮಟ್ಟಿಗೆ ಆದಾಯ ಬಂತು. 'ವಿಷ್ಣು' ಸಿನಿಮಾದಿಂದ ನಷ್ಟ ಆಯಿತು. ನಂತರ ಭೀಕರ ಕಷ್ಟದ ದಿನಗಳನ್ನು ನೋಡಿದ್ದೇನೆ. ಅದೆಲ್ಲ ಅನುಭವಕ್ಕೆ ಮಾತ್ರ ದಕ್ಕುವಂತಹದ್ದು.

**◆ ಚಂದ್ರಶೇಖರ್ ಪಾತ್ರ ಹೇಗಿದೆ?**

ಉದಯ ಅಂದ ತಕ್ಷಣ ನನಗೆ 'ಭುವನೇಶ್ವರಿ' ಸಿನಿಮಾ ನೆನಪಿಗೆ ಬರುತ್ತದೆ. ಶ್ರುತಿ ಮತ್ತು ಬೇಬಿ ಶ್ಯಾಮಿಲಿ ಅವರ ಜೊತೆ ಮಾಡಿದ್ದೆ. 'ಅಕ್ಷರ ಮಾಲೆ' ಎನ್ನುವ ಕಾರ್ಯಕ್ರಮವನ್ನು 12 ವರ್ಷ ಉದಯಕ್ಕೆ ಮಾಡಿದ್ದೇನೆ. ನನ್ನ ಪಾಲಿಗೆ ಮಾತೃ ಸಂಸ್ಥೆ ಇದ್ದಹಾಗೆ ಆಗಿದೆ. ತುಂಬ ದೀರ್ಘ ಕಾಲದ ನಂತರ ಕಿರುತೆರೆಗೆ ಬಂದೆ. ಝೀ ಕನ್ನಡದ 'ಸತ್ಯ' ಮತ್ತೊಮ್ಮೆ ನನ್ನನ್ನು ಕಿರುತೆರೆಗೆ ಕರೆತಂದಿದೆ. ಅದರಲ್ಲಿ ಪಾತ್ರವನ್ನು ಚೆನ್ನಾಗಿ ಪೋಷಣೆ ಮಾಡಿದ್ದಾರೆ. 'ಗಂಗೆ ಗೌರಿ' ಹೊಸ ಧಾರಾವಾಹಿ. ನಾನು ಇಬ್ಬರು ಹೆಣ್ಣುಮಕ್ಕಳ ತಂದೆಯಾಗಿ ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತಿದ್ದೇನೆ. ಪಾತ್ರ ತುಂಬ ಭಾವನಾತ್ಮಕವಾಗಿ ಬೆಸೆಯುತ್ತದೆ. ಹಲವು ಸಂಗತಿಗಳನ್ನು ಅಚ್ಚುಕಟ್ಟಾಗಿ ನಿರೂಪಿಸುತ್ತಿದ್ದಾರೆ. ತಂದೆ ಮಕ್ಕಳ ಸಂಬಂಧ, ಪರಸ್ಪರರ ನಡುವಿನ ಪ್ರೀತಿ–ಪ್ರೇಮದ ಸಂದರ್ಭ ತುಂಬ ನಾಟಕೀಯವಾಗಿಯೂ ಕಾಣಿಸುತ್ತದೆ.

**◆ ಅವಕಾಶ ಕೇಳಿ ಬಂದವರಿಗೆ ನಿಮ್ಮ ಸಲಹೆ ಏನು?**

ಯಾರಾದರೂ ಅವಕಾಶದ ಕೋರಿಕೆಯನ್ನು ಇಟ್ಟಾಗ, ಹಿಂಸೆ ಆಗುತ್ತದೆ. ಸ್ವತಃ ನಾನೇ ನಾಲ್ಕು ಜನರಿಗೆ ಕೆಲಸ ಕೊಡುವ ಸ್ಥಿತಿಯಲ್ಲಿದ್ದರೆ ನೋಡಬಹುದು. ಆ ಪರಿಸ್ಥಿತಿಯಲ್ಲಿ ನಾನಿಲ್ಲ. ನಾನೂ ಒಂದು ಕಾಲದಲ್ಲಿ ಹಾಗೇ ಹುಡುಕಿಕೊಂಡು ಬಂದವನು. ಈಗ ನಾನೇ ಖಾಲಿ ಇದ್ದಾಗ 'ಪ್ರಯತ್ನ ಮಾಡಿ ಸಿಕ್ಕ ಕೆಲಸ ಚೆನ್ನಾಗಿ ಮಾಡಿ ಅವಕಾಶಗಳು ಕೈ ಹಿಡಿಯುತ್ತವೆ' ಎಂದು ಸಮಾಧಾನ ಮಾಡುತ್ತೇನೆ. ನಾನು ಬಿಜಿ ಇದ್ದಾಗ ಅನೇಕರಿಗೆ ಅವಕಾಶಗಳನ್ನು ಕೊಟ್ಟಿದ್ದೇನೆ. ಅದೆಲ್ಲ ನಾನು ಹೇಳುವುದಿಲ್ಲ. ತೆರೆಯ ಮೇಲೆ ಮಿಂಚಬೇಕು ಎನ್ನುವ ಆಸೆ ಸಹಜವಾಗಿ ಬಹುತೇಕರಲ್ಲಿ ಬರುತ್ತದೆ. ಅದರಲ್ಲಿ ಕೆಲವರು ಮಾತ್ರ ಆ ಹುಚ್ಚು ಇಟ್ಟುಕೊಂಡು ಈ ಕಡೆ ಬರುತ್ತಾರೆ. ಬಹಳಷ್ಟು ಜನ ಯಾವುದೋ ಮಾರ್ಗದಲ್ಲಿ ಜೀವನ ರೂಪಿಸಿಕೊಳ್ಳುತ್ತಾರೆ. ಇಲ್ಲಿ ಅನಿಶ್ಚಿತತೆ ಅಭದ್ರತೆ ತುಂಬ ಇದೆ. ಆದಾಯ ಸರಿಯಾಗಿ ಆಗದಿದ್ದರೆ ತುಂಬ ಕಷ್ಟ.

■ ರಾಘವೇಂದ್ರ ಕೆ.